RNU AIR DHARWAD

JULY 10, 2024

AKASHAVANI - DHARWAD

PRADESH SAMACHARA (KANNADA) 7:05 AM

<><><>

ಆಕಾಶವಾಣಿ

ಪ್ರದೇಶ ಸಮಾಚಾರ

ಓದಿದವರು: ಹರ್ಷವರ್ಧನ ಶೀಲವಂತ

<><><>

ಮುಖ್ಯಾಂಶಗಳು

<><><>

- ರಾಜ್ಯದಲ್ಲಿ ಆರೋಗ್ಯ ತುರ್ತು ಪರಿಸ್ಥಿತಿ ಘೋಷಣೆ ಅನಗತ್ಯ; ತಜ್ಞರ ಅಭಿಮತ – ಮುಖ್ಯಮಂತ್ರಿ ಸಿದ್ದರಾಮಯ್ಯ, ಸ್ಪಷ್ಟನೆ.
- 'ಪುನೀತ್ ರಾಜ್‌ಕುಮಾರ್ ಹೃದಯ ಜ್ಯೋತಿ ಯೋಜನೆ'; 3ನೇ ಹಂತದಲ್ಲಿ, ರಾಜ್ಯದ 13 ಜಿಲ್ಲೆಗಳಿಗೆ ವಿಸ್ತರಣೆ – ದಿನೇಶ್ ಗುಂಡೂರಾವ್, ಮಾಹಿತಿ.
- ರಾಜ್ಯದ ಎಲ್ಲ ಶಿಕ್ಷಣ ಸಂಸ್ಥೆಗಳಲ್ಲಿ, 'ನಾವು ಮನುಜರು' ಎಂಬ ವಿಶೇ ’ ಯೋಜನೆ, ಜಾರಿಗೆ.
- ಮಾನವ ಹಕ್ಕು ಉಲ್ಲಂಘನೆ; ಗದಗ ಜಿಲ್ಲೆಯಲ್ಲಿ, 14 ಪ್ರಕರಣಗಳು, ವಿಚಾರಣೆ ಹಂತದಲ್ಲಿ – ಟಿ. ಶ್ಯಾಮ್ ಭಟ್, ಹೇಳಿಕೆ.

<><><>

ಈಗ ವಾರ್ತೆಗಳ ವಿವರ

<><><>

ರಾಜ್ಯದಲ್ಲಿ ಆರೋಗ್ಯ ತುರ್ತು ಪರಿಸ್ಥಿತಿ ಘೋಷಿಸುವ ಅಗತ್ಯವಿಲ್ಲ ಎಂದು, ತಜ್ಞರು ಅಭಿಪ್ರಾಯಪಟ್ಟಿದ್ದಾಗಿ, ಮುಖ್ಯಮಂತ್ರಿ ಸಿದ್ದರಾಮಯ್ಯ, ಸ್ಪಷ್ಟಪಡಿಸಿದ್ದಾರೆ. ಬೆಂಗಳೂರಿನಲ್ಲಿ ಎರಡು ದಿನಗಳ ಕಾಲ ನಡೆದ ಹಿರಿಯ ಅಧಿಕಾರಿಗಳ ಸಭೆಯ ಬಳಿಕ, ಮುಖ್ಯಮಂತ್ರಿ, ಸುದ್ದಿಗಾರರಿಗೆ ಮಾಹಿತಿ ನೀಡಿ, ಟಾಸ್ಕ್ ಫೋರ್ಸ್ ರಚಿಸುವುದಾಗಿ ತಿಳಿಸಿದರು.

<><><>

ಡೆಂಘಿ ನಿಯಂತ್ರಣಕ್ಕೆ ಸರ್ಕಾರ ಎಲ್ಲ ಕ್ರಮಗಳನ್ನು ಕೈಗೊಂಡಿದೆ; ಗ್ರಾಮೀಣ ಪ್ರದೇಶದ ಸಾರ್ವಜನಿಕರು ಕೈ ಜೋಡಿಸಬೇಕು ಎಂದು, ಯಾದಗಿರಿ ಜಿಲ್ಲೆ, ಸುರಪುರ ಶಾಸಕ ರಾಜಾ ವೇಣುಗೋಪಾಲ ನಾಯಕ್ ಮನವಿ ಮಾಡಿದ್ದಾರೆ.

<><><>

ಶಿಕಾರಿಪುರ ತಾಲೂಕಿನ ಶಿರಾಳಕೊಪ್ಪ ಭಾಗದಲ್ಲಿ, ಡೆಂಘಿ ಕಾಯಿಲೆ ಉಲ್ಬಣಿಸಿರುವ ಹಿನ್ನೆಲೆ, ಶಿಕಾರಿಪುರ ಶಾಸಕ ಬಿ.ವೈ.ವಿಜಯೇಂದ್ರ ಪಟ್ಟಣದ ಸಮುದಾಯ ಆರೋಗ್ಯ ಕೇಂದ್ರಕ್ಕೆ ಭೇಟಿ ನೀಡಿ ಪರಿಶೀಲಿಸಿದರು. ಇತ್ತೀಚೆಗೆ ಡೆಂಘಿಯಿಂದ ಮೃತಪಟ್ಟ 9 ವರ್ಷದ ಬಾಲಕನ ಮನೆಗೆ ತೆರಳಿ, ಪಾಲಕರಿಗೆ ಸಾಂತ್ವನ ಹೇಳಿದರು.

<><><>

ಡೆಂಘಿ ನಿಯಂತ್ರಿಸಲು, ಆರೋಗ್ಯ ಇಲಾಖೆಯ ಸಲಹೆ ಸೂಚನೆಗಳನ್ನು, ತಪ್ಪದೇ ಪಾಲಿಸಿ. ಡೆಂಘಿ ನಿಯಂತ್ರಿಸಲು ಕೈಜೋಡಿಸಿ ಎಂದು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಖಾತೆ ಸಚಿವ ದಿನೇಶ್ ಗುಂಡೂರಾವ್, ಸಾರ್ವಜನಿಕರಲ್ಲಿ ಮನವಿ ಮಾಡಿದ್ದಾರೆ.

<><><>

ದಿನೇಶ್ ಗುಂಡೂರಾವ್ ಧ್ವನಿ 34 ಸೆಕೆಂದುಗಳು

<><><>

ತೀವ್ರ ಮತ್ತು ಹಠಾತ್ ಹೃದಯಾಘಾತವನ್ನು ತಪ್ಪಿಸಲು, ಆರೋಗ್ಯ ಇಲಾಖೆ ಆರಂಭಿಸಿರುವ 'ಪುನೀತ್ ರಾಜ್‌ಕುಮಾರ್ ಹೃದಯ ಜ್ಯೋತಿ' ಯೋಜನೆ, ರಾಜ್ಯದ 13 ಜಿಲ್ಲೆಗಳ 45 ತಾಲೂಕು ಆಸ್ಪತ್ರೆಗಳಿಗೆ ವಿಸ್ತರಿಸಲಾಗುತ್ತಿದೆ ಎಂದು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಖಾತೆ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದ್ದಾರೆ. ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಈ ವಿಷಯ ಪ್ರಕಟಿಸಿರುವ ಸಚಿವರು, ಈಗಾಗಲೇ 1 ಮತ್ತು 2ನೇ ಹಂತದಲ್ಲಿ, ಈ ಯೋಜನೆ 15 ಜಿಲ್ಲೆಗಳ 70 ತಾಲೂಕು ಆಸ್ಪತ್ರೆಗಳಲ್ಲಿ ಜಾರಿಯಲ್ಲಿದೆ. ಇದೀಗ 3ನೇ ಹಂತ ಅನು ಠಾನಗೊಳ್ಳುತ್ತಿದೆ ಎಂದಿದ್ದಾರೆ.

<><><>

ರಾಜ್ಯದ ಎಲ್ಲ ಶಿಕ್ಷಣ ಸಂಸ್ಥೆಗಳಲ್ಲಿ, 'ನಾವು ಮನುಜರು' ಎಂಬ ವಿಶೇ ' ಯೋಜನೆಯನ್ನು, ಸರ್ಕಾರ ಜಾರಿಗೊಳಿಸಿದೆ. ಸರ್ಕಾರಿ, ಅನುದಾನಿತ ಮತ್ತು ಖಾಸಗಿ, ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳಲ್ಲಿ, ವಾರದಲ್ಲಿ 2 ಗಂಟೆಗಳ ವಿಚಾರ ವಿಮರ್ಶೆ ಮತ್ತು ಸಂವಾದ ಚಟುವಟಿಕೆಗಳನ್ನು ಒಳಗೊಂಡ, ವಿಶೇಷ ತರಗತಿಗಳನ್ನು ನಡೆಸುವಂತೆ, ಸೂಚಿಸಲಾಗಿದೆ. ಶಾಲಾ ವೇಳಾಪಟ್ಟಿಯಲ್ಲಿ ಮೌಲ್ಯ ಶಿಕ್ಷಣದ ಒಂದು ಅವಧಿ ಮತ್ತು ಉಳಿದ 2 ಅವಧಿಗಳನ್ನು ಹೊಂದಾಣಿಕೆ ಮಾಡಿಕೊಂಡು, ಕಡ್ಡಾಯವಾಗಿ ಅನು ಠಾನಗೊಳಿಸುವಂತೆ, ಶಿಕ್ಷಣ ಇಲಾಖೆ ಆದೇಶಿಸಿದೆ.

<><><>

ಬೆಂಗಳೂರು ಗ್ರಾಮಾಂತರ ಜಿಲ್ಲೆ, ಹೊಸಕೋಟೆ ತಾಲೂಕಿನ ನಂದಗುಡಿ ಹಾಗೂ ಪಿಳ್ಳಗುಂಪೆ ಕೈಗಾರಿಕಾ ಪ್ರದೇಶದ, ವಿವಿಧ ಸ್ಥಳಗಳಲ್ಲಿ ಕಾರ್ಮಿಕ ಇಲಾಖೆ ತಪಾಸಣೆ ವೇಳೆ, ಆರು ಜನ ಕಿಶೋರ ಕಾರ್ಮಿಕರನ್ನು ರಕ್ಷಿಸಿ, ಮಕ್ಕಳ ಕಲ್ಯಾಣ ಸಮಿತಿ ಮುಂದೆ ಹಾಜರು ಪಡಿಸಿದೆ. ಮಕ್ಕಳ ಸಹಾಯವಾಣಿ–1098 ಮೂಲಕ ಸಹ, ಪ್ರಕರಣಗಳು ಬೆಳಕಿಗೆ ಬರುತ್ತಿದ್ದು, ಬಾಲ ಮತ್ತು ಕಿಶೋರ ಕಾರ್ಮಿಕರನ್ನು ದುಡಿಮೆಗೆ ನೇಮಿಸಿಕೊಳ್ಳದಂತೆ, ಅಂಗಡಿ–ಮುಂಗಟ್ಟುಗಳ ಮಾಲೀಕರಿಗೆ ಕರಪತ್ರಗಳನ್ನು ಹಂಚಿ, ಕಾನೂನಿನಡಿ ದಂಡನೆಯ ಪ್ರಾವಧಾನದ ಬಗ್ಗೆ, ತಿಳಿವಳಿಕೆ ಮೂಡಿಸಲಾಗುತ್ತಿದೆ ಎಂದು, ಬಾಲ ಕಾರ್ಮಿಕ ಯೋಜನಾ ನಿರ್ದೇಶಕ ಸುಬ್ಬಾರಾವ್ ತಿಳಿಸಿದ್ದಾರೆ.

<><><>

ಗದಗ ಜಿಲ್ಲೆಯಲ್ಲಿ, ಮಾನವ ಹಕ್ಕು ಉಲ್ಲಂಘನೆಯಾದ 14 ಪ್ರಕರಣಗಳು, ವಿವಿಧ ಹಂತದ ವಿಚಾರಣೆ ಮತ್ತು ತನಿಖೆ ಪ್ರಗತಿಯಲ್ಲಿದೆ ಎಂದು, ರಾಜ್ಯ ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷ ಟಿ.ಶ್ಯಾಮ್ ಭಟ್ ತಿಳಿಸಿದ್ದಾರೆ. ನಗರದ ಜಿಲ್ಲಾಡಳಿತ ಭವನದ ಮುಖ್ಯ ಸಭಾಂಗಣದಲ್ಲಿ, ಸಾರ್ವಜನಿಕರಿಂದ ಅಹವಾಲು ಸ್ವೀಕರಿಸಿ, ಅವರು ಮಾತನಾಡಿದರು.

ಮಾನವ ಹಕ್ಕುಗಳ ಉಲ್ಲಂಘನೆಯಾಗದಂತೆ ನೋಡಿಕೊಳ್ಳುವುದು; ಅವುಗಳ ಸಂರಕ್ಷಣೆ ಮಾಡುವುದು, ಪ್ರತಿಯೊಬ್ಬ ಸರ್ಕಾರಿ ನೌಕರನ ನೈತಿಕ ಜವಾಬ್ದಾರಿಯಾಗಿದೆ ಎಂದರು.

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಧಾರವಾಡ ಜಿಲ್ಲೆಯಾದ್ಯಂತ ಮುಂಗಾರು ಮಳೆ, ಸಮೃದ್ಧವಾಗಿ ಸುರಿದಿದೆ. ಹೆಸರು, ಉದ್ದು, ಸೋಯಾಬೀನ್, ಶೇಂಗಾ, ಹತ್ತಿ ಹಾಗೂ ಜವಾರಿ ಜೋಳಗಳನ್ನು ರೈತರು ಬಿತ್ತನೆ ಮಾಡಿದ್ದಾರೆ. ಹಸುರಾದ ಹೊಲಗಳು ಕಣ್–ಮನ ಸೆಳೆಯುವಂತಿವೆ. ಬಿತ್ತನೆ ಮಾಡಿದ 20 ದಿನಗಳ ಬಳಿಕ ರೈತರು, ಕಳೆ ಕೀಳಲು ಎಡೆಕುಂಟೆ ಹೊಡೆಯುವುದು ವಾಡಿಕೆ. ಎತ್ತು, ಟ್ರಾಕ್ಟರ್ ಮುಂತಾದವುದನ್ನು ಬಳಸಿ, ಎಡೆಕುಂಟೆ ಹೊಡೆಯುವುದು ಸಣ್ಣ ಹಿಡುವಳಿಯ ರೈತರಿಗೆ ಖರ್ಚಿನ ಬಾಬತ್ತು. ಹೀಗಾಗಿ ಧಾರವಾಡ ತಾಲೂಕು ಉಪ್ಪಿನ ಬೆಟಗೇರಿಯ ಗಂಗಪ್ಪ ತಳವಾರ, ರೈತರ ಶ್ರಮವನ್ನು ಕಡಿಮೆಗೊಳಿಸುವ ಕಡಿಮೆ ವೆಚ್ಚದ ದೇಸಿ ಸೈಕಲ್ ಎಡೆಕುಂಟೆ ತಯಾರಿಸಿ, ಬಳಸುತ್ತಿದ್ದಾರೆ. ಪ್ರದೇಶ ಸಮಾಚಾರಕ್ಕಾಗಿ ತಮ್ಮ ಅನುಭವ ಹಂಚಿಕೊಂಡಿದ್ದಾರೆ. ರೈತ ಗಂಗಪ್ಪ ತಳವಾರ.

<><><>

ಗಂಗಪ್ಪ ತಳವಾರ ಧ್ವನಿ 34 ಸೆಕೆಂದುಗಳು

<><><>

ರಾಷ್ಟ್ರೀಯ ಮೀನು ಕೃಷಿಕರ ದಿನವನ್ನು, ಪ್ರತಿ ವರ್ಷ ಜುಲೈ 10 ರಂದು, ದೇಶಾದ್ಯಂತ ಎಲ್ಲ ಮೀನುಗಾರರು, ಮೀನು ಕೃಷಿಕರು ಮತ್ತು ಸಂಬಂಧಪಟ್ಟ ಪಾಲುದಾರರೊಂದಿಗೆ ಒಗ್ಗಟ್ಟನ್ನು ಪ್ರದರ್ಶಿಸಲು, ಆಚರಿಸಲಾಗುತ್ತದೆ. ಮೀನು ಕೃಷಿಕರು, ಜಲ ಕೃಷಿ ಉದ್ಯಮದ ವೃತ್ತಿಪರರು ಮತ್ತು ಇತರ ಪಾಲುದಾರರ ಅಮೂಲ್ಯ ಕೊಡುಗೆಗಳನ್ನು ಗುರುತಿಸಲು ಮತ್ತು ಪ್ರಶಂಸಿಸಲು, ಪ್ರತಿ ವರ್ಷ ಜುಲೈ 10 ರಂದು, ರಾಷ್ಟ್ರೀಯ ಮೀನು ಕೃಷಿಕರ ದಿನವನ್ನು ಆಚರಿಸಲಾಗುತ್ತದೆ.

<><><>

ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರು, ಕರ್ನಾಟಕದಲ್ಲಿ ಬಾಕಿ ಇರುವ ಹೆದ್ದಾರಿ ಯೋಜನೆಗಳನ್ನು ಶೀಘ್ರವೇ ಕಾರ್ಯಗತಗೊಳಿಸಲು, ಕೇಂದ್ರ ಸಾರಿಗೆ ಮತ್ತು ಹೆದ್ದಾರಿ ಖಾತೆ ಸಚಿವ, ನಿತಿನ್ ಗಡ್ಕರಿ ಅವರನ್ನು ಹೊಸ ದಿಲ್ಲಿಯಲ್ಲಿ ಭೇಟಿಯಾಗಿ, ಮನವಿ ಮಾಡಿದರು.

<><><>

ಹುಬ್ಬಳ್ಳಿ–ಧಾರವಾಡ ಸೆಂಟ್ರಲ್ ವಿಧಾನಸಭಾ ಕ್ಷೇತ್ರದ ಶಾಸಕ ಮಹೇಶ ಟೆಂಗಿನಕಾಯಿ ಅವರು ಸಹ, ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಅವರೊಂದಿಗೆ, ನಿತಿನ್ ಗಡ್ಕರಿ ಅವರನ್ನು ಭೇಟಿ ಮಾಡಿ, ಹೆಚ್ಚಿನ ಅನುದಾನ ನೀಡುವಂತೆ ಮನವಿ ಮಾಡಿದ್ದಾರೆ.

<><><>

ಉತ್ತರಕನ್ನಡ ಜಿಲ್ಲೆಯಲ್ಲಿ, ಮಳೆ ಮಂಗಳವಾರ ಇಳಿಮುಖವಾಗಿದ್ದು, ಹೊನ್ನಾವರ ತಾಲೂಕಿನ 3 ಹಾಗೂ ಕುಮಟಾದ 2 ಕಾಳಜಿ ಕೇಂದ್ರಗಳು ಸೇರಿದಂತೆ, ಒಟ್ಟು 5 ಕಾಳಜಿ ಕೇಂದ್ರಗಳಲ್ಲಿ, 150 ಮಂದಿ ಆಶ್ರಯ ಪಡೆದಿದ್ದಾರೆ ಎಂದು, ಉತ್ತರಕನ್ನಡ ಜಿಲ್ಲಾಧಿಕಾರಿ ಲಕ್ಷ್ಮೀಪ್ರಿಯಾ ತಿಳಿಸಿದ್ದಾರೆ.

<><><>

ಗೋಕಾಕ್ ಜಲಪಾತದಲ್ಲಿ ನೀರಿನ ಹರಿವು ಜಾಸ್ತಿಯಾಗಿದ್ದು, ಪ್ರವಾಸಿಗರ ಭದ್ರತೆಯ ದೃಷ್ಟಿಯಿಂದ, ಪ್ರವೇಶ ನಿರ್ಭಂಧಿಸಲಾಗಿದೆ ಎಂದು, ಬೆಳಗಾವಿ ಜಿಲ್ಲೆ ಪೊಲೀಸ್ ವರಿಷ್ಠಾಧಿಕಾರಿ, ಭೀಮಾಶಂಕರ ಗುಳೇದ ತಿಳಿಸಿದ್ದಾರೆ.

<><><>

ಹಾರಂಗಿ ಜಲಾಶಯದಿಂದ ಒಂದು ಸಾವಿರ ಕ್ಯುಸೆಕ್ ನೀರನ್ನು, ನದಿಗೆ ಹರಿ ಬಿಡಲಾಗಿದೆ ಎಂದು, ಸಣ್ಣ ನೀರಾವರಿ ಖಾತೆ ಸಚಿವ ಎನ್.ಎಸ್.ಬೋಸರಾಜು ತಿಳಿಸಿದ್ದಾರೆ.

<><><>

ಶಿವಮೊಗ್ಗೆಯ ತುಂಗಾ ಬಲ ದಂಡೆ ಮತ್ತು ಎಡದಂಡೆ ಕಾಲುವೆ ಮೂಲಕ, ಇಂದು ನೀರು ಹರಿಸಲಾಗುತ್ತಿದೆ. ಅಚ್ಚುಕಟ್ಟು ಪ್ರದೇಶದ ರೈತರು, ಮುನ್ನೆಚ್ಚರಿಕೆ ವಹಿಸುವಂತೆ ಕೋರಲಾಗಿದೆ.

<><><>

ಇದೇ 14 ರಿಂದ ರಾಜ್ಯದ ಕರಾವಳಿ, ಮಲೆನಾಡು ಹಾಗೂ ಒಳನಾಡು ಜಿಲ್ಲೆಗಳ ಕೆಲ ಭಾಗಗಳಲ್ಲಿ, ಮಳೆ ಹೆಚ್ಚಾಗುವ ಸಾಧ್ಯತೆ ಇದೆ ಎಂದು, ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರ ತಿಳಿಸಿದೆ.

<><><>

ಶ್ರೀ ಅಜಾತ ನಾಗಲಿಂಗ ಮಹಾಸ್ವಾಮಿಗಳ, 143ನೇ ಆರಾಧನಾ ಮಹೋತ್ಸವ, ಇಂದು ಮತ್ತು ನಾಳೆ ನವಲಗುಂದದಲ್ಲಿ ಆಯೋಜಿತವಾಗಿದೆ. ಶ್ರೀ ವೀರೇಂದ್ರ ಮಹಾಸ್ವಾಮಿಗಳ ಸಾನಿಧ್ಯದಲ್ಲಿ ಜರುಗಲಿರುವ ಕಾರ್ಯಕ್ರಮದಲ್ಲಿ, ಇಂದು ಸಂಜೆ 6 ಗಂಟೆಗೆ, ಪದ್ಮಶ್ರೀ ಪುರಸ್ಕೃತ, ಖ್ಯಾತ ಮನೋವೈದ್ಯ ಬೆಂಗಳೂರಿನ ಡಾಕ್ಟರ್ ಸಿ.ಆರ್.ಚಂದ್ರಶೇಖರ್ ಅವರಿಗೆ, ನಾಗಲಿಂಗ ಶ್ರೀ ಪ್ರಶಸ್ತಿಯನ್ನು ಪ್ರದಾನ ಮಾಡಿ, ಗೌರವಿಸಲಾಗುತ್ತಿದೆ. ಇಂದು ಮಧ್ಯಾಹ್ನ 1 ಗಂಟೆಗೆ ಮರುಘಾರ ಪೂಜೆ, ನಾಳೆ ಪಲ್ಲಕ್ಕಿ ಮತ್ತು ಮೇಣೆ ಉತ್ಸವಗಳು ನೆರವೇರಲಿವೆ ಎಂದು ಪ್ರಕಟಣೆ ತಿಳಿಸಿದೆ.

<><><>

“ಕೃತಕ ಬುದ್ಧಿಮತ್ತೆ ಯುಗದಲ್ಲಿ ಸಮೂಹ ಸಂವಹನದ ಸವಾಲುಗಳು ಮತ್ತು ಅವಕಾಶಗಳು” ವಿಷಯ ಕುರಿತ ಎರಡು ದಿನಗಳ ವಿಚಾರ ಸಂಕಿರಣ ಹಾಗೂ ರೇನ್ ಬೋ ಮಾಧ್ಯಮ ಹಬ್ಬದಲ್ಲಿ, ಡಾಕ್ಟರ್ ಬಿ.ಟಿ.ಮುದ್ದೇಶ ನೇತೃತ್ವದ, ತುಮಕೂರಿನ ಸಿದ್ಧಾರ್ಥ ಮಾಧ್ಯಮ ಅಧ್ಯಯನ ಕೇಂದ್ರದ ವಿದ್ಯಾರ್ಥಿಗಳು, ಸಮಗ್ರ ವೀರಾಗ್ರಣಿ ಪ್ರಶಸ್ತಿ ಗಳಿಸಿದರು. ಧಾರವಾಡ ಕರ್ನಾಟಕ ವಿಶ್ವವಿದ್ಯಾಲಯದ, ಸಮೂಹ ಸಂವಹನ ಹಾಗೂ ಪತ್ರಿಕೋದ್ಯಮ, ಸ್ನಾತಕೋತ್ತರ ಅಧ್ಯಯನ ವಿಭಾಗ, ತನ್ನ 40ನೇ ವರ್ಷದ ಸಂಸ್ಥಾಪನಾ ಸಂಭ್ರಮಾಚರಣೆ ಪ್ರಯುಕ್ತ, ವಿಶ್ವವಿದ್ಯಾಲಯದ ಸುವರ್ಣ ಮಹೋತ್ಸವ ಸಭಾಭವನದಲ್ಲಿ ರಾಷ್ಟ್ರೀಯ ಸಮ್ಮೇಳನವನ್ನು ಆಯೋಜಿಸಿತ್ತು.

<><><>

ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಸಚಿವ ಎಸ್. ಮಧು ಬಂಗಾರಪ್ಪ, ಇಂದು ಕೊಪ್ಪಳ ಜಿಲ್ಲೆಗೆ ಭೇಟಿ ನೀಡಲಿದ್ದಾರೆ.

<><><>

ರಾಜ್ಯ ಮಾನವ ಹಕ್ಕುಗಳ ಆಯೋಗ, 11ನೇ ತಾರೀಖಿನ ವರೆಗೆ, ಗದಗ, ಕೊಪ್ಪಳ ಮತ್ತು ವಿಜಯನಗರ ಜಿಲ್ಲೆಗಳಲ್ಲಿ, ಸಭೆ ನಡೆಸಲಿದೆ.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- ರಾಜ್ಯದಲ್ಲಿ ಆರೋಗ್ಯ ತುರ್ತು ಪರಿಸ್ಥಿತಿ ಘೋಷಣೆ ಅನಗತ್ಯ; ತಜ್ಞರ ಅಭಿಮತ – ಮುಖ್ಯಮಂತ್ರಿ ಸಿದ್ದರಾಮಯ್ಯ, ಸ್ಪಷ್ಟನೆ.
- 'ಪುನೀತ್ ರಾಜ್‌ಕುಮಾರ್ ಹೃದಯ ಜ್ಯೋತಿ ಯೋಜನೆ'; 3ನೇ ಹಂತದಲ್ಲಿ, ರಾಜ್ಯದ 13 ಜಿಲ್ಲೆಗಳಿಗೆ ವಿಸ್ತರಣೆ – ದಿನೇಶ್ ಗುಂಡೂರಾವ್, ಮಾಹಿತಿ.
- ರಾಜ್ಯದ ಎಲ್ಲ ಶಿಕ್ಷಣ ಸಂಸ್ಥೆಗಳಲ್ಲಿ, 'ನಾವು ಮನುಜರು' ಎಂಬ ವಿಶೇ ' ಯೋಜನೆ, ಜಾರಿಗೆ.
- ಮಾನವ ಹಕ್ಕು ಉಲ್ಲಂಘನೆ; ಗದಗ ಜಿಲ್ಲೆಯಲ್ಲಿ, 14 ಪ್ರಕರಣಗಳು, ವಿಚಾರಣೆ ಹಂತದಲ್ಲಿ – ಟಿ. ಶ್ಯಾಮ್ ಭಟ್, ಹೇಳಿಕೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಈ ಬೆಳಗ್ಗೆ 7.35 ಕ್ಕೆ.

<><><>

ಹರ್ಷ